ಅನುಬಂಧ - 1

ತೆಂಗು ನುಸಿ ನಿಯಂತ್ರಣೆ ಯೋಜನೆಯಡಿ ಜಿಲ್ಲಾವಾರು ಉಪಯೋಗಿಸಿದ ಔಷಧಿ ಪ್ರಮಾಣ ಹಾಗೂ ಖರ್ಚು ಮಾಡಿದ ಹಣದ ವಿವರಗಳು

ಕ್ರ. ಸಂ.	ಜಿಲ್ಲೆಯ ಹೆಸರು	ಉಪಯೋಗಿಸಿದ ಔಷಧಿ ಪ್ರಮಾಣ (ಲೀಟರ್‌ಗಳಲ್ಲಿ)	ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)	ಉಪಯೋಗಿಸಿದ ಔಷಧಿ ಪ್ರಮಾಣ (ಲೀಟರ್‌ಗಳಲ್ಲಿ)	ಖರ್ಚು ಮಾಡಿದ ಅನುದಾನ (ಲೀಟರ್‌ಗಳಲ್ಲಿ)
1.	ಬೆಂಗಳೂರು ಗ್ರಾಮಾಂತರ	15899	23.59	21767	74.76
2.	ಬೆಂಗಳೂರು ನಗರ	3750	14.17	4480	56.15
3.	ಮಂಡ್ಯ	9343	27.99	13298	130.60
4.	ತುಮಕೂರು	14816	35.13	25153	171.00
5.	ಕೋಲಾರ	8133	26.70	5295	113.52
6.	ಮೈಸೂರು	5952	19.12	6087	42.00
7.	ಚಾಮರಾಜನಗರ	8357	13.24	3810	19.20
8.	ಚಿತ್ರದುರ್ಗ	4098	24.49	13355	135.40
9.	ದಾವಣದೆರೆ	2654	4.50	4492	13.80
10.	ಹಾಸನ	5108	26.36	10654	99.72
11.	ಶಿವಮೊಗ್ಗ	835	2.50	3125	21.42
12.	ಚಿಕ್ಕಮಗಳೂರು	6907	21.45	10135	63.60
13.	ಉ. ಕನ್ನಡ	303	0.98	-	-
14.	ದ. ಕನ್ನಡ, ಗದಗ ಬಳ್ಳಾರಿ, ಹಾವೇರಿ ಕೊಪ್ಪಳ, ರಾಯಚೂರು, ಬೆಳಗಾವಿ, ಉಡುಪಿ ಧಾರವಾಡ	-	-	1317	18.92
	ಒಟ್ಟು	86155	240.22	122968	960.09

ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯ ಸಹಕಾರಿ ಬ್ಯಾಂಕುಗಳ ಆರ್ಥಿಕ ಮುಗ್ಗಟ್ಟು

1848(2176): ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಹಕಾರಿ ಬ್ಯಾಂಕುಗಳ ಸಂಖ್ಯೆ ಎಷ್ಟು?

ಆ. ಯಾವ ಯಾವ ಬ್ಯಾಂಕುಗಳು ಆರ್ಥಿಕ ತೊಂದರೆ ಎದುರಿಸುತ್ತಿವೆ. ಆರ್ಥಿಕ ತೊಂದರೆ ಎದುರಿಸುತ್ತಿರುವ ಬ್ಯಾಂಕುಗಳಿಗೆ ಸರಕಾರ ಯಾವ ರೀತಿ ಹಣದ ಅನುಕೂಲತೆ ನೀಡುತ್ತಿದೆ; (ವಿವರ ನೀಡುವುದು)

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 15 ಸಹಕಾರ ಬ್ಯಾಂಕುಗಳು ಬರುತ್ತವೆ.

ಆ. ಈ ಕೆಳಕಂಡ 14 ಸಹಕಾರಿ ಬ್ಯಾಂಕುಗಳು ಆರ್ಥಿಕ ತೊಂದರೆಯನ್ನು ಎದುರಿಸುತ್ತಿವೆ:

1. ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ನಿ, ಧಾರವಾಡ,
2. ಹುಬ್ಬಳ್ಳಿ ಅರ್ಬನ್ ಕೋಆಪರೇಟಿವ್ ಬ್ಯಾಂಕ್ ನಿ, ಹುಬ್ಬಳ್ಳಿ
3. ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ.
4. ವರ್ಧಮಾನ್ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ.
5. ನವಕಲ್ಯಾಣ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ.
6. ಆಯುಧ್ ಅರ್ಬನ ಕೋಆಪರೇಟಿವ್ ಬ್ಯಾಂಕ್ ನಿ, ಹುಬ್ಬಳ್ಳಿ.
7. ಗೌರ್ನಮೆಂಟ್ ಎಂಪ್ಲಾಯೀಸ್ ಸಹಕಾರ ಬ್ಯಾಂಕ್ ನಿ, ಧಾರವಾಡ
8. ಅಭಿನಂದನಾ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ.
9. ಆರ್ಯವೈಶ್ಯ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ.
10. ಮಹಾಲಕ್ಷ್ಮಿ ಅರ್ಬನ್ ಕೋಆಪರೇಟಿವ್ ಬ್ಯಾಂಕ್ ನಿ, ಧಾರವಾಡ.
11. ದಿ.ಎಸ್.ಎಸ್.ಕೆ. ಕೋಆಪರೇಟಿವ್ ಬ್ಯಾಂಕ್ ನಿ, ಹುಬ್ಬಳ್ಳಿ.
12. ಶ್ರೀ ಗುರುಸಿದ್ದೇಶ್ವರ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ.
13. ಮರಾಠ ಸಹಕಾರ ಬ್ಯಾಂಕ್ ನಿ, ಹುಬ್ಬಳ್ಳಿ
14. ವಿಶ್ವ ಕಲ್ಯಾಣ ಕೋಆಪರೇಟಿವ್ ಬ್ಯಾಂಕ್ ನಿ, ಹುಬ್ಬಳ್ಳಿ.

ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ನಿ, ಧಾರವಾಡ, ಈ ಬ್ಯಾಂಕಿನ ಸುಧಾರಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ಸರ್ಕಾರದ ಹಾಗೂ ಅಪೆಕ್ಸ್ ಬ್ಯಾಂಕಿನ ಪ್ರಯತ್ನದಿಂದಾಗಿ ಬ್ಯಾಂಕು ರೂ. 41.37 ಕೋಟಿ ಸಂಪನ್ಮೂಲಗಳನ್ನು ಸಂಗ್ರಹಿಸಿದೆ.

ಆ) 1999-2000ನೇ ಸಾಲಿನಲ್ಲಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಿದ ಬಾಬ್ತು ನಬಾರ್ಡ್‌ನಿಂದ ಪುನರ್‌ಧನ ರೂ. 19.10 ಕೋಟಿಯನ್ನು ಪಡೆಯಲು ಸರ್ಕಾರ ರೂ. 6.84 ಕೋಟಿ ಮಂಜೂರು ಮಾಡಿದೆ. ರೂ. 6.84 ಕೋಟಿಯನ್ನು ಅಪೆಕ್ಸ್ ಬ್ಯಾಂಕಿಗೆ ಸರ್ಕಾರವು ಈಗಾಗಲೇ ಬಿಡುಗಡೆ ಮಾಡಿದೆ.

ಇ) ಸಾಲದ ಅಂತರ ಯೋಜನೆಯಡಿಯಲ್ಲಿ ರೂ. 103.79 ಲಕ್ಷ ನೀಡಲಾಗಿದೆ.

ಈ) ಸಾಲದ ಅಂತರ ಸುಮಾರು ರೂ. 31.80 ಕೋಟಿಯನ್ನು ಈ ಬ್ಯಾಂಕಿಗೆ ಕೊಡಲು ಆರ್ಥಿಕ ನೆರವನ್ನು ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಉ) ಪಟ್ಟಣ ಬ್ಯಾಂಕುಗಳು ರೂ. 161.46 ಕೋಟಿ ಠೇವಣಿ ಹೊಂದಿದ್ದು, ಆರ್.ಬಿ.ಐ. ಸೂಚನೆ ಪ್ರಕಾರ ನೆಟ್ ಡಿಮ್ಯಾಂಡ್ ಅಂಡ್ ಟೈಂ ಲಯಬಿಲಿಟಿಯ ಶೇ. 10 ರಿಂದ 15 ರಷ್ಟನ್ನು

ಸರ್ಕಾರದ ಭದ್ರತೆಯಲ್ಲಿ ತೊಡಗಿಸಬೇಕಾಗಿದ್ದು, ಇದಕ್ಕೆ ಕೆ.ಸಿ.ಸಿ. ಬ್ಯಾಂಕಿನಿಂದ ಠೇವಣಿಯನ್ನು ವಾಪಸ್ಸು ಪಡೆದು ಅದಕ್ಕೆ ಇನ್ನೂ ಹೆಚ್ಚಿನ ಆರ್ಥಿಕ ಮುಗ್ಗಟ್ಟು ಆಗುತ್ತದೆಂಬ ಕಾರಣದಿಂದ ಒಂದು ವರ್ಷದ ಅವಧಿಗೆ ವಿನಾಯ್ತಿ ಕೋರಲಾಗಿದೆ.

ಮೇಲ್ಕಂಡ ಪಟ್ಟಿಯ ಕ್ರಮ ಸಂಖ್ಯೆ 2 ರಿಂದ 14 ರವರೆಗಿನ ಹದಿಮೂರು ಪಟ್ಟಣ ಸಹಕಾರ ಬ್ಯಾಂಕುಗಳ ಸುಧಾರಣೆಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಧಾರವಾಡ ಇದು ಎದುರಿಸುತ್ತಿರುವ ಆರ್ಥಿಕ ತೊಂದರೆಯಿಂದಾಗಿ ಸದರಿ ಬ್ಯಾಂಕಿನಲ್ಲಿ ಇಟ್ಟಿದ್ದ ಹಣವನ್ನು ಮೇಲ್ಕಂಡ 13 ಪಟ್ಟಣ ಸಹಕಾರ ಬ್ಯಾಂಕುಗಳು ಮರಳಿ ಪಡೆದುಕೊಳ್ಳಲು ಸಾಧ್ಯವಾಗದೇ ಇರುವ ಕಾರಣಕ್ಕಾಗಿ ಆರ್ಥಿಕ ತೊಂದರೆಯನ್ನು ಎದುರಿಸುತ್ತಿವೆ. ಕೆಲವು ಸಶಕ್ತ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಮತ್ತು ಅಪೆಕ್ಸ್ ಬ್ಯಾಂಕಿನಿಂದ ಸಂಪನ್ಮೂಲ ಕ್ರೋಢೀಕರಿಸಿ ಪರಿಸ್ಥಿತಿಯನ್ನು ಸುಧಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರ ಜೊತೆಗೆ ಸದರಿ ಬ್ಯಾಂಕುಗಳ ಸಾಲ ವಸೂಲಾತಿಯನ್ನು ಉತ್ತಮ ಪಡಿಸಿ ಗ್ರಾಹಕರ ಮತ್ತು ಬ್ಯಾಂಕಿನ ರಕ್ಷಣೆಯನ್ನು ಕಾಯ್ದುಕೊಳ್ಳುವ ದಿಸೆಯಲ್ಲಿ ಯೋಜಿತ ಕ್ರಮಗಳನ್ನು ಕೈಗೊಳ್ಳುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಪಡಿತರ ಚೀಟಿ ನೀಡಿಕೆ

1849(2179): ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈವರೆಗೆ ಎಷ್ಟು ಜನರಿಗೆ ಪಡಿತರ ಚೀಟಿ ನೀಡಲಾಗಿದೆ (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಆ. ಪಡಿತರ ಚೀಟಿ ಹೊಸದಾಗಿ ಬಯಸಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಹೊಸ ಪಡಿತರ ಚೀಟಿ ಕೊರತೆ ಇರುವುದು ನಿಜವೇ?

ಶ್ರೀ ರಾಮ ಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 164775 ಪಡಿತರ ಚೀಟಿಗಳನ್ನು ನೀಡಲಾಗಿದೆ.

ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ:-

1.	ಧಾರವಾಡ ಸಿಟಿ	59067
2.	ಹುಬ್ಬಳ್ಳಿ ಸಿಟಿ	52140
3.	ಹುಬ್ಬಳ್ಳಿ ಗ್ರಾ	53568
	ಒಟ್ಟು	164775
ಆ)	ಧಾರವಾಡ ಹಸಿಟಿ ಕ್ಷೇತ್ರ	724
	ಹುಬ್ಬಳ್ಳಿ ಸಿಟಿ ಕ್ಷೇತ್ರ	745
	ಹುಬ್ಬಳ್ಳಿ ಗ್ರಾಮ ಕ್ಷೇತ್ರ	805
	ಒಟ್ಟು	2274